ಮಂಡ್ಯ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ
ಮಂಡ್ಯ -- 571 401
MANDYA INSTITUTE OF MEDICAL SCIENCES
MANDYA -571 401
(Autonomous Medical Institution, Government of Karnataka)

Phone & Fax : 08232-231001
Director : 08232-222086
CAO : 08232-231197
FA : 08232-401198
E.Mail Address:
mimsmandya@gmail.com

## ದಿನಾಂಕ: 10.01.2013ರಂದು ಮಾನ್ಯ ವೈದ್ಯಕೀಯ ಶಿಕ್ಷಣ ಸಚಿವರು, ಕರ್ನಾಟಕ ಸರ್ಕಾರ, ಬೆಂಗಳೂರು ರವರ ಅಧ್ಯಕ್ಷತೆಯಲ್ಲಿ ಮಧ್ಯಾಹ್ನ 02.30 ಗಂಟೆಗೆ ಕೊಠಡಿ ಸಂಖ್ಯೆ: 407, 408 ರಲ್ಲಿ ನಡೆದ ಮಂಡ್ಯ ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯ ಸಾಮಾನ್ಯ ಆಡಳಿತ ಪರಿಷತ್ ಸಭೆಯ ನಡವಳಿಗಳು:

**ಅಧ್ಯಕ್ಷತೆ :**

1. ಶ್ರೀ ಎಸ್.ಎ.ರಾಮದಾಸ್,
ಸನ್ಮಾನ್ಯ ವೈದ್ಯಕೀಯ ಶಿಕ್ಷಣ ಸಚಿವರು,
ಹಾಗೂ ಅಧ್ಯಕ್ಷರು, ಮಿಮ್ಸ್ ಆಡಳಿತ ಪರಿಷತ್,
ಕರ್ನಾಟಕ ಸರ್ಕಾರ,
ಬೆಂಗಳೂರು.

**ಸಭೆಯಲ್ಲಿ ಹಾಜರಿದ್ದವರು**

2. ಸರ್ಕಾರದ ಕಾರ್ಯದರ್ಶಿಗಳು, — ಉಪಾಧ್ಯಕ್ಷರು
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ
(ವೈದ್ಯಕೀಯ ಶಿಕ್ಷಣ),
ಕರ್ನಾಟಕ ಸರ್ಕಾರ, ಬೆಂಗಳೂರು.

3. ಸರ್ಕಾರದ ಅಪರ ಕಾರ್ಯದರ್ಶಿಗಳು, — ಸದಸ್ಯರು
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ,
(ವೈದ್ಯಕೀಯ ಶಿಕ್ಷಣ),
ಕರ್ನಾಟಕ ಸರ್ಕಾರ, ಬೆಂಗಳೂರು.

4. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, — ಸದಸ್ಯರು
ಆರ್ಥಿಕ ಇಲಾಖೆ,
ವಿಧಾನಸೌಧ, ಬೆಂಗಳೂರು.

5. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, — ಸದಸ್ಯರು
ಯೋಜನಾ ಇಲಾಖೆ,
ಬಹುಮಹಡಿ ಕಟ್ಟಡ, ಬೆಂಗಳೂರು.

6. ಅಂ ಮುಕ್ತರು, ಸದಸ್ಯರು
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳು
ಆನಂದ್‌ರಾವ್ ವೃತ್ತ, ಬೆಂಗಳೂರು

7. ನಿರ್ದೇಶಕರು, ಸದಸ್ಯರು
ವೈದ್ಯಕೀಯ ಶಿಕ್ಷಣ ನಿರ್ದೇಶನಾಲಯ,
ಆನಂದ್‌ರಾವ್ ವೃತ್ತ, ಬೆಂಗಳೂರು.

8. ಜಿಲ್ಲಾಧಿಕಾರಿಗಳು, ಸದಸ್ಯರು
ಮಂಡ್ಯ ಜಿಲ್ಲೆ,
ಮಂಡ್ಯ.

9. ಕಾ ರ್ಯಪಾಲಕ ಅಭಿಯಂತರರು, ಸದಸ್ಯರು
ಲೋಕೋಪಯೋಗಿ ಇಲಾಖೆ,
ಮಂಡ್ಯ

10. ಮುಖ್ಯ ಆಡಳಿತಾಧಿಕಾರಿಗಳು, ಸದಸ್ಯರು
ಮಂಡ್ಯ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ,
ಮಂಡ್ಯ

11. ಆರ್ಥಿಕ ಸಲಹೆಗಾರರು, ಸದಸ್ಯರು
ಮಂಡ್ಯ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ,
ಮಂಡ್ಯ.

12. ನಿರ್ದೇಶಕರು, ಸದಸ್ಯ ಕಾರ್ಯದರ್ಶಿಗಳು
ಮಂಡ್ಯ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ,
ಮಂಡ್ಯ

ಪ್ರಾರಂಭದಲ್ಲಿ ನಿರ್ದೇಶಕರು ಹಾಗೂ ಸದಸ್ಯ ಕಾರ್ಯದರ್ಶಿ, ಆಡಳಿತ ಪರಿಷತ್, ಮಂಡ್ಯ ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯ ಆಡಳಿತ ಪರಿಷತ್ ಸಭೆಯಲ್ಲಿ ಹಾಜರಿರುವ ಅಧ್ಯಕ್ಷರು ಹಾಗೂ ಎಲ್ಲಾ ಸದಸ್ಯರನ್ನು ಸ್ವಾಗತಿಸಿ ಸಭೆಯನ್ನು ನಡೆಸಿಕೊಡುವಂತೆ ಮಾನ್ಯ ಅಧ್ಯಕ್ಷರನ್ನು ಕೋರಿದರು. ಸನ್ಮಾನ್ಯ ವೈದ್ಯಕೀಯ ಶಿಕ್ಷಣ ಸಚಿವರು ಹಾಗೂ ಅಧ್ಯಕ್ಷರು, ಸಭೆಯ ಅಧ್ಯಕ್ಷತೆ ವಹಿಸಿ ಆಡಳಿತ ಪರಿಷತ್ ಸಭೆಯ ಸಭಾಸೂಚಿ (ಅಜೆಂಡಾ)ಯನ್ನು ವಿಷಯವಾರು ಚರ್ಚೆಗೆ ತೆಗೆದುಕೊಳ್ಳಲು ಸೂಚಿಸಿದರು.

**ವಿಷಯ ಸಂಖ್ಯೆ 01 :**

**ದಿನಾಂಕ:24.05.2012 ರಂದು ನಡೆದ ಸಂಸ್ಥೆಯ ಆಡಳಿತ ಪರಿಷತ್ ಸಭೆಯ ನಡವಳಿ ಹಾಗೂ ಅನುಪಾಲನಾ ವರದಿಯನ್ನು ಅನುಮೋದಿಸುವ ಕುರಿತು.**

**ನಿರ್ಣಯ** : ದಿನಾಂಕ:24.05.2012ರಂದು ನಡೆದ ಸಂಸ್ಥೆಯ ಆಡಳಿತ ಪರಿಷತ್ ಸಭೆಯ ನಡವಳಿ ಹಾಗೂ ಅನುಪಾಲನಾ ವರದಿಯನ್ನು ಮುಂದಿನ ಆಡಳಿತ ಪರಿಷತ್ ಸಭೆಯ ಮುಂದೆ ಮಂಡಿಸಿ ಅನುಮೋದನೆ ಪಡೆಯಲು ಸಭೆಯು ಸೂಚಿಸಿತು.

**ವಿಷಯ ಸಂಖ್ಯೆ 02 :**

**ದಿನಾಂಕ:03.12.2012 ರಂದು ನಡೆದ ಸಂಸ್ಥೆಯ ಆರ್ಥಿಕ ಮಂಡಳಿ ಸಭೆಯ ನಡವಳಿಯನ್ನು ಅನುಮೋದಿಸುವ ಕುರಿತು.**

**ನಿರ್ಣಯ** : ದಿನಾಂಕ:03.12.2012 ರಂದು ನಡೆದ ಸಂಸ್ಥೆಯ ಆರ್ಥಿಕ ಸಮಿತಿಯ ಸಭೆಯ ನಡವಳಿಯನ್ನು ಓದಿ ಅನುಮೋದಿಸಲಾಯಿತು.

**ವಿಷಯ ಸಂಖ್ಯೆ 03 :**

**ಮಂಡ್ಯ ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯ ಬೋಧಕ ಆಸ್ಪತ್ರೆಗೆ ವೈದ್ಯಕೀಯ ಅಧೀಕ್ಷಕರನ್ನು ನೇಮಿಸುವ ಬಗ್ಗೆ.**

**ನಿರ್ಣಯ** : ರಿಟ್ ಪಿಟೀಷನ್ ಸಂಖ್ಯೆ:30328/2012 ರ ದಿನಾಂಕ: 05.10.2012ರ ಆದೇಶದಲ್ಲಿ ಘನ ನ್ಯಾಯಾಲಯವು ಸಂಸ್ಥೆಗೆ ಒಂದು ತಿಂಗಳ ಅವಧಿಯೊಳಗೆ ವೈದ್ಯಕೀಯ ಅಧೀಕ್ಷಕರ ನೇಮಕಾತಿಯ ಪ್ರಕ್ರಿಯೇಯನ್ನು ನಡೆಸಬೇಕೆಂದು ಆದೇಶಿಸಿರುವುದರ ಮೇರೆಗೆ ಸಂಸ್ಥೆಯಲ್ಲಿನ ಬೋಧಕ ಆಸ್ಪತ್ರೆಗೆ ವೈದ್ಯಕೀಯ ಅಧೀಕ್ಷಕರನ್ನು ನೇಮಿಸಲು ಸರ್ಕಾರದ ಸುತ್ತೋಲೆ ಸಂಖ್ಯೆ ಆಕುಕ 105 ಎಂಪಿಎಸ್ 2012 (ಭಾಗ-2) ದಿ: 20.11.2012 ರಂತೆ ಕ್ರಮವಹಿಸಿ ಸುತ್ತೋಲೆ ಹೊರಡಿಸಿರುವುದರ ಮೇರೆಗೆ ಡಾ॥ ಕೆ.ಎಂ.ಶಿವಕುಮಾರ್, ಪ್ರಾಧ್ಯಾಪಕರು ಹಾಗೂ ಮುಖ್ಯಸ್ಥರು,

ವೈದ್ಯಶಾಸ್ತ್ರ ವಿಭಾಗ, ಇವರು ಸಲ್ಲಿಸಿದ ಅರ್ಜಿಯನ್ನು ದಿನಾಂಕ:14.12.2013 ರಂದು ಸಂಸ್ಥೆಯ Screening Committee/ Selection Committee ಯಲ್ಲಿ ಸುಧೀರ್ಘವಾಗಿ ಚರ್ಚಿಸಿ, ನಾಲ್ಕು ಮಂದಿ ಅಭ್ಯರ್ಥಿಗಳ ಪೈಕಿ ಎಲ್ಲಾ ರೀತಿಯಲ್ಲಿ ಅರ್ಹರಿರುವ ಡಾ॥ ಕೆ.ಎಂ.ಶಿವಕುಮಾರ್, ಪ್ರಾಧ್ಯಾಪಕರು ಹಾಗೂ ಮುಖ್ಯಸ್ಥರು, ವೈದ್ಯಶಾಸ್ತ್ರ ವಿಭಾಗ, ರವರನ್ನು ಸಂಸ್ಥೆಯ ವೈದ್ಯಕೀಯ ಅಧೀಕ್ಷಕರನ್ನಾಗಿ ಸಂಸ್ಥೆಯ ಆಡಳಿತ ಪರಿಷತ್ ಸಭೆಯ ತೀರ್ಮಾನದ ಷರತ್ತಿಗೊಳಪಟ್ಟು ನೇಮಿಸಲು ತೀರ್ಮಾನಿಸಿರುತ್ತದೆ.

ಸಭೆಯಲ್ಲಿ ಹಾಜರಿದ್ದ ಸದಸ್ಯರೆಲ್ಲರೂ ಸಂಸ್ಥೆಯ ಬೋಧಕ ಆಸ್ಪತ್ರೆಯ ವೈದ್ಯಕೀಯ ಅಧೀಕ್ಷಕರ ನೇಮಕಾತಿಯ ಬಗ್ಗೆ ಸುಧೀರ್ಘವಾಗಿ ಚರ್ಚಿಸಿ ಸದರಿಯವರ ಮೇಲೆ ನಿವೃತ್ತ ನ್ಯಾಯಾಧೀಶರು ನೀಡಿರುವ ವರದಿಯಲ್ಲಿನಂತೆ ತ್ರಿಸದಸ್ಯ ಸಮಿತಿಯಿಂದ ಇಲಾಖಾ ವಿಚಾರಣೆಯ ಫಲಿತಾಂಶ ಕಾಯ್ದಿರಿಸಿ Screening Committee/ Selection Committee ತೀರ್ಮಾನದಂತೆ ಡಾ॥ ಕೆ.ಎಂ.ಶಿವಕುಮಾರ್, ಪ್ರಾಧ್ಯಾಪಕರು ಹಾಗೂ ಮುಖ್ಯಸ್ಥರು, ವೈದ್ಯಶಾಸ್ತ್ರ ವಿಭಾಗ, ಇವರನ್ನು ಮುಂದಿನ 3 ವರ್ಷಗಳ ಅವಧಿಗೆ ಅಥವಾ ಸರ್ಕಾರದ ಮುಂದಿನ ಆದೇಶದ ಮೇರೆಗೆ ಸಂಸ್ಥೆಯ ಬೋಧಕ ಆಸ್ಪತ್ರೆಯ ವೈದ್ಯಕೀಯ ಅಧೀಕ್ಷಕರನ್ನಾಗಿ ನೇಮಿಸಲು, ನಿರ್ದೇಶಕರು, ಮಂಡ್ಯ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಮಂಡ್ಯ ರವರಿಗೆ ತಿಳಿಸುತ್ತಾ ಸರ್ವಾನುಮತದಿಂದ ಆಡಳಿತ ಪರಿಷತ್ ಸಭೆಯಲ್ಲಿ ತೀರ್ಮಾನಿಸಲಾಯಿತು.

**ವಿಷಯ ಸಂಖ್ಯೆ 04 :**

**ತುರ್ತು ಚಿಕಿತ್ಸಾ ಅಪಘಾತ ವಿಭಾಗದ ವೈದ್ಯಾಧಿಕಾರಿಗಳ (ಸಿ.ಎಂ.ಓ) ತುರ್ತು ಚಿಕಿತ್ಸಾ ಭತ್ಯೆ ಮತ್ತು ಸ್ನಾತಕೋತ್ತರ ಭತ್ಯೆ ನೀಡುವ ಬಗ್ಗೆ.**

**ನಿರ್ಣಯ** : ಈ ವಿಚಾರವಾಗಿ ಸಭೆಯಲ್ಲಿ ಮಾನ್ಯ ಉಪಾಧ್ಯಾಕರು ಹಾಗೂ ಸರ್ಕಾರದ ಕಾರ್ಯದರ್ಶಿಗಳು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, (ವೈದ್ಯಕೀಯ ಶಿಕ್ಷಣ), ರವರು ಮಾತನಾಡುತ್ತಾ ಈ ನಿಟ್ಟಿನಲ್ಲಿ ರಾಜ್ಯದ ಎಲ್ಲಾ ವೈದ್ಯಕೀಯ ಸಂಸ್ಥೆಗಳಿಗೂ ಅನ್ವಹಿಸುವಂತೆ ಒಂದು ಏಕರೂಪ ಸರ್ಕಾರಿ ಆದೇಶ ನೀಡಲಾಗುತ್ತಿದೆ, ಅದರಂತೆ ಮುಂದಿನ ಕ್ರಮ ವಹಿಸಲು ಆಡಳಿತ ಪರಿಷತ್ ಸಭೆಯಲ್ಲಿ ತೀರ್ಮಾನಿಸಲಾಯಿತು.

**ವಿಷಯ ಸಂಖ್ಯೆ ೦೫ :**

**ಶ್ರೀ ಕೆ.ಎಸ್.ನಿಂಗಪ್ಪ, ನಿವೃತ್ತ ಕೆ.ಎ.ಎಸ್ ಅಧಿಕಾರಿಗಳು ಇವರನ್ನು ಸಂಸ್ಥೆಯ ಮುಖ್ಯ ಆಡಳಿತಾಧಿಕಾರಿಗಳಾಗಿ ನೇಮಕ ಮಾಡಿಕೊಂಡಿರುವ ಬಗ್ಗೆ.**

**ನಿರ್ಣಯ** : ಶ್ರೀ ಕೆ.ಎಸ್. ನಿಂಗಪ್ಪ, ನಿವೃತ್ತ ಕೆ.ಎ.ಎಸ್ ಅಧಿಕಾರಿಗಳು, ಇವರನ್ನು ಸರ್ಕಾರದ ಪತ್ರ ಸಂಖ್ಯೆ ಆಕುಕ 198 ಎಂಪಿಎಸ್ 2012, ದಿನಾಂಕ:27.12.2012 ರಂತೆ ಕ್ರಮವಹಿಸಿ ಸಂಸ್ಥೆಯಲ್ಲಿ ಖಾಲಿ ಇದ್ದ ಮುಖ್ಯ ಆಡಳಿತಾಧಿಕಾರಿಗಳ ಹುದ್ದೆಗೆ ನೇಮಕಾತಿ ಮಾಡಿಕೊಂಡಿದ್ದು, ಸದರಿ ಅಧಿಕಾರಿಗಳು ದಿನಾಂಕ:28.12.2012 ರ ಪೂರ್ವಾಹ್ನ ಕರ್ತವ್ಯಕ್ಕೆ ವರದಿ ಮಾಡಿಕೊಂಡಿರುತ್ತಾರೆ. ಸರ್ಕಾರದ ಆದೇಶದಂತೆ ನೇಮಕಾತಿ ಮಾಡಿರುವುದನ್ನು ಸಭೆಯು ಅನುಮೋದಿಸಿತು.

**ವಿಷಯ ಸಂಖ್ಯೆ ೦೬ :**

**ಸಂಸ್ಥೆಯಲ್ಲಿ ಖಾಲಿ ಇರುವ ಬೋಧಕ ಹಾಗೂ ಬೋಧಕೇತರ ಸಿಬ್ಬಂದಿಗಳನ್ನು ನೇಮಕಾತಿ ಮಾಡುವ ಕುರಿತು.**

**ನಿರ್ಣಯ** : ಸಂಸ್ಥೆಯಲ್ಲಿ ಖಾಲಿ ಇರುವ ಬೋಧಕ ಹಾಗೂ ಬೋಧಕೇತರ ಸಿಬ್ಬಂದಿಗಳನ್ನು ಪತ್ರಿಕಾ ಪ್ರಕಟಣೆ ಹೊರಡಿಸಿ ನೇರ ನೇಮಕಾತಿ ಮಾಡಿಕೊಳ್ಳಲು ಬಗ್ಗೆ ಆರ್ಥಿಕ ಇಲಾಖೆಯಿಂದ ಅನುಮತಿ ಪಡೆದು ಕ್ರಮ ಕೈಗೊಳ್ಳುವಂತೆ ಸಭೆಯು ಸೂಚಿಸಿತು.

ವಿಷಯ ಸಂಖ್ಯೆ 07 :

ಮಿಮ್ಸ್ ಸಂಸ್ಥೆಯ ಬೋಧಕ ಆಸ್ಪತ್ರೆಯಲ್ಲಿ "ಹೊರಗುತ್ತಿಗೆ ಆಧಾರದ" (OUT SOURCE) ಮೇಲೆ ಕರ್ತವ್ಯ ನಿರ್ವಹಿಸುವವರ ಸಿಬ್ಬಂದಿಗಳನ್ನು ಗುತ್ತಿಗೆ ಆಧಾರದ ಮೇಲೆ ನೇಮಕಾತಿ ಮಾಡಿಕೊಳ್ಳುವ ಕುರಿತು.

ನಿರ್ಣಯ : ಹೊಸದಾಗಿ ಟೆಂಡರ್ ಕರೆದು ಹೊರಗುತ್ತಿಗೆ ಆಧಾರದ ಮೇಲೆ ನೇಮಿಸಿಕೊಳ್ಳಲು ಆಡಳಿತ ಪರಿಷತ್ ಸಭೆಯು ಸೂಚಿಸಿತು.

ಮುಂದುವರೆದಂತೆ ಟೆಂಡರ್ ಪ್ರಕ್ರಿಯೆ ಪೂರ್ಣಗೊಳ್ಳುವವರೆಗೆ 1-2 ತಿಂಗಳವರೆಗೆ ಹಾಲಿ ಇರುವ ಟೆಂಡರ್‌ದಾರರನ್ನೆ ಮುಂದುವರೆಸಿ ಪ್ರಸ್ತುತ ಸಾಲಿನಲ್ಲಿ ಚಾಲ್ತಿಯಲ್ಲಿರುವ ದರಗಳಂತೆ ಪಾವತಿಸಲು ಸೂಚಿಸಿತು, ಟೆಂಡರ್‌ದಾರರು ಕೋರಿರುವ ಶೇ.12% ಸೇವಾ ತೆರಿಗೆ ಬದಲು ಚರ್ಚಿಸಿ ಸಂದಾನ ಮಾಡಿ ಪಾವತಿಸಲು ನಿರ್ದೇಶಕರಿಗೆ, ಆಡಳಿತ ಪರಿಷತ್ ಸಭೆಯು ಸೂಚಿಸಿತು.

ವಿಷಯ ಸಂಖ್ಯೆ 08 :

2005-06 ರಿಂದ 2009-10ರ ವರೆಗಿನ ಮಹಾಲೇಖಪಾಲಕರ ಆಡಿಟ್ ವರದಿಯನ್ನು ಅನುಮೋದಿಸುವ ಕುರಿತು.

ನಿರ್ಣಯ : ಈ ಸಂಸ್ಥೆಯ 2005-06 ರಿಂದ 2009-10ನೇ ಸಾಲಿನವರೆಗೆ ಮಹಾಲೇಖಪಾಲಕರ ಆಡಿಟ್ ವರದಿಯನ್ನು ಆಡಳಿತ ಪರಿಷತ್ ಸಭೆಯು ಅನುಮೋದಿಸಿತು.

<u>ವಿಷಯ ಸಂಖ್ಯೆ 09 : ಅಧ್ಯಕ್ಷರ ಅಪ್ಪಣೆ ಮೇರೆಗೆ ಇತರೆ ವಿಷಯಗಳು.</u>

ಸಂಸ್ಥೆಯ ಲೆಕ್ಕಪತ್ರಗಳನ್ನು ಸನ್ನದು ಲೆಕ್ಕಿಗರಾದ ಮೆ॥ಉಮೇಶ್‌ರಾವ್ ಅಂಡ್ ಅಸೋಸಿಯೇಟ್ಸ್, ಮೈಸೂರು ರವರಿಗೆ ವಹಿಸಲಾಗಿದ್ದು ಈ ಸಂಬಂಧವಾಗಿ ಆಡಳಿತ ಪರಿಷತ್ ಸಭೆಯ ಮುಂದೆ ಮಂಡಿಸಿ ಅನುಮೋದನೆ ಪಡೆದುಕೊಳ್ಳುವಂತೆ ಮಹಾಲೇಖಪಾಲಕರು ಆಕ್ಷೇಪಿಸಿರುವ ಮೇರೆಗೆ, ಅನುಮೋದನೆ ಕೋರಿ ಮಂಡಿಸಿದೆ.

**ನಿರ್ಣಯ** : ಸಂಸ್ಥೆಯ ಲೆಕ್ಕ ಪತ್ರಗಳನ್ನು ಸನ್ನದು ಲೆಕ್ಕಿಗರಾದ ಮೆ॥ ಉಮೇಶ್‌ರಾವ್ ಅಂಡ್ ಅಸೋಸಿಯೇಟ್ಸ್, ಮೈಸೂರು ರವರಿಗೆ ವಹಿಸಿದ್ದು ಶುಲ್ಕ ಪಾವತಿಸಿರುವುದನ್ನು ಸ್ಥಿರೀಕರಿಸಿ ಆಡಳಿತ ಪರಿಷತ್ ಸಭೆಯು ಅನುಮೋದಿಸಿತು.

(ಡಾ॥ಬಿ.ದೇವಾನಂದ್)
ನಿರ್ದೇಶಕರು ಹಾಗೂ
ಸದಸ್ಯ ಕಾರ್ಯದರ್ಶಿಗಳು,
ಮಿಮ್ಸ್ ಆಡಳಿತ ಪರಿಷತ್,
ಮಂಡ್ಯ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ,
ಮಂಡ್ಯ

(ಎಸ್.ಎ.ರಾಮದಾಸ್)
ವೈದ್ಯಕೀಯ ಶಿಕ್ಷಣ ಸಚಿವರು ಹಾಗೂ
ಅಧ್ಯಕ್ಷರು, ಮಿಮ್ಸ್ ಆಡಳಿತ ಪರಿಷತ್,
ಮಂಡ್ಯ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ,
ಮಂಡ್ಯ